554(692) ಡಾ ಎಂ.ಸಿ. ಸುಧಾಕರ (ಚಿಂತಾಮಣಿ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಡಿ ಎಷ್ಟು ಮನೆಗಳು ಮಂಜೂರಾಗಿವೆ?

ಆ) ಪಂಚಾಯ್ತಿವಾರು ಎಷ್ಟು ಹಣ ಬಿಡುಗಡೆಯಾಗಿರುತ್ತದೆ?

ಇ) ಉಳಿದ ಹಣ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಗ್ರಾಮೀಣ ಆಶ್ರಯ ಯೋಜನೆಯಡಿ 2005–06ನೇ ಶ್ರೇಣಿಗೆ 1360 ಮನೆಗಳನ್ನು ಮತ್ತು 2006–07ನೇ ಶ್ರೇಣಿಗೆ 2040 ಮನೆಗಳನ್ನು ಮಂಜೂರು ಮಾಡಲಾಗಿದೆ

ಆ) ಈ ತಾಲ್ಲೂಕಿಗೆ ಒಟ್ಟು ರೂ 151 15 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಗ್ರಾಮ ಪಂಚಾಯ್ತಿವಾರು ವಿವರವನ್ನು ಅನುಬಂಧ 'ಅ'ದಲ್ಲಿ ನೀಡಲಾಗಿದೆ

ಇ) ತಾಲ್ಲೂಕಿನ ವೆಬ್‌ಸೈಟಿನಲ್ಲಿ ನಮೂದಿಸುವ ಪ್ರಗತಿಯನ್ನು ಆಧರಿಸಿ ಗ್ರಾಮ ಪಂಚಾಯತಿಗಳಿಗೆ ನೇರವಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಿಂದ ಹಣ ಬಿಡುಗಡೆ ಮಾಡಲಾಗುತ್ತಿದೆ ಗ್ರಾಮ ಪಂಚಾಯತಿಗಳು ಮನೆಯ ಪ್ರಗತಿಯನ್ನು ಆಧರಿಸಿ 3 ಅಥವಾ 4 ಹಂತಗಳಲ್ಲಿ ಹಣವನ್ನು ಫಲಾನುಭವಿಗೆ ನೇರವಾಗಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ

ಅನುಬಂಧ "ಅ"

ಚಿಂತಾಮಣಿ ತಾಲ್ಲೂಕಿಗೆ ಗ್ರಾಮೀಣ ಆಶ್ರಯ 2005–06ನೇ ಸಾಲಿನಡಿಯಲ್ಲಿ ಗ್ರಾಮ ಪಂಚಾಯತಿವಾರು ಬಿಡುಗಡೆ ಮಾಡಿರುವ ಅನುದಾನ

ಕ್ರಮ ಸಂಖ್ಯೆ	ಗ್ರಾಮ ಪಂಚಾಯತ್	ಬಿಡುಗಡೆ ಮಾಡಿರುವ ಅನುದಾನ
1	Anur	4 00
2	Batlahalli	4 25
3	Bhomsettihalli	3 00
4	Bhumsettihalli	1 00

5	Buradagunte	4 00
6	Chennasandra	3 10
7	Chilakalanerpu	4 25
8	Chinnasandra	1 00
9	Doddaganjur	4 00
10	Hirekattigenahalli	4 00
11	Iragampalli	4 35
12	Kadadanamari	3 30
13	Kagathi	3 80
14	Kaiwara	4 00
15	Kattarıguppe	4 20
16	Kencharlahalli	5 00
17	Konapalli	4 70
18	Korlaparthi	5 00
19	Kotagal	5 00
20	Kurubur	4 25
21	Mastenahalli	5 00
22	Mitta Hill	4 30
23	Moodlagollahalli	4 45
24	Munaganahalli	4 25
25	Muragamalla	4 40
26	Nandiganahalli	4 60
27	Oolavadi	5 00
28	Peddur	5 00
29	Perumachana Halli	5 00
30	Raguttahalli	4 90
31	Santekalla Halli	5 00
32	Settyhalli	4 80
33	Talagawara	4 25
34	Upparapet	4 50

35	Yagavakote	5 00
36	Yemigadele	4 50
	ಒಟ್ಟು	**151 15**

556(560) ಶ್ರೀ ಸುರೇಶ್ ಎಸ್ ಮಾರಿಹಾಳ (ಕಿತ್ತೂರು) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿತ್ತೂರು ಮತಕ್ಷೇತದ ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಇಲಾಖೆಯ ರಸ್ತೆಗಳ ಸುಧಾರಣೆಗೆ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಯಾವಾಗ ಹಣ ಮಂಜೂರು ಮಾಡಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಬಂದಿದೆ

ಆ) ಈ ರಸ್ತೆ ಸುಧಾರಣೆ ಕಾಮಗಾರಿಗಳಿಗೆ ರೂ 48 00 ಲಕ್ಷಗಳ ಅವಶ್ಯಕತೆ ಇದ್ದು, ಅನುದಾನದ ಲಭ್ಯತೆಯನ್ನು ಆಧರಿಸಿ ಈ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು

557(551) ಶ್ರೀ ಸುರೇಶ್ ಎಸ್ ಮಾರಿಹಾಳ (ಕಿತ್ತೂರು) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕಿತ್ತೂರು ಮತಕ್ಷೇತ್ರದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು?

ಆ) ಇವುಗಳಿಗೆ ಕುಡಿಯುವ ನೀರಿನ ಹಾಗೂ ಶೌಚಾಲಯಗಳ ವ್ಯವಸ್ಥೆಯನ್ನು ಒದಗಿಸಿ ಕೊಡಲಾಗಿದೆಯೆ?

ಇ) ಎಷ್ಟು ಶಾಲೆಗಳು ಈ ಸೌಲಭ್ಯದಿಂದ ವಂಚಿತವಾಗಿವೆ?

ಈ) ಅತ್ಯಗತ್ಯವಾಗಿರುವ ಈ ಸೌಲಭ್ಯವನ್ನು ಪೂರ್ಣ ಪ್ರಾಮಾಣದಲ್ಲಿ ಒದಗಿಸಿಕೊಡುವ ಬಗ್ಗೆ ಸರ್ಕಾರದ ಕ್ರಮಗಳೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಕಿತ್ತೂರು ಮತಕ್ಷೇತ್ರದಲ್ಲಿ 148 ಸರ್ಕಾರಿ ಪ್ರಾಥಮಿಕ ಮತ್ತು 15 ಸರ್ಕಾರಿ ಪ್ರೌಢಶಾಲೆಗಳಿವೆ